# ಶ್ರೀಮಾತೆಯವರ ಪತ್ರಗಳು - ೧೭

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ

## ಪತ್ರ - ೯೫

೨೬.೬.೧೯೧೩
೧೨.೩.೨೦, ಜಯರಾಂಬಾಟಿ

ಶುಭವಾಗಲಿ.

ತಾಯಿ, ನಿನ್ನ ಪತ್ರವು ಸಿಕ್ಕಿದೆ. ನಾನು ಸದ್ಯ ಚೆನ್ನಾಗಿದ್ದೇನೆ. ಆದರೆ ಪ್ರತಿದಿನ ಸ್ನಾನ ಮಾಡಿದರೆ ಕಿವಿಯು ಸ್ವಲ್ಪ ಭಾರವಾಗುವುದು. ರಾಧು ಸಾಧಾರಣ ಯಾವತ್ತೂ ಚೆನ್ನಾಗಿರುವುದಿಲ್ಲ. ३,೪ ದಿನ ಚೆನ್ನಾಗಿದ್ದರೆ ಮತ್ತೆ ನೋವು ಶುರುವಾಗುವುದು. ಈಚೆಗೆ ३,೪ ದಿನಗಳಿಂದ ಸ್ವಲ್ಪ ಚೆನ್ನಾಗಿದ್ದಾಳೆ.

ನಿನಗೆ ನನ್ನ ಆಶೀರ್ವಾದ. ಚೆನ್ನಾಗಿರುವೆ ಎಂದು ಆಶಿಸುತ್ತೇನೆ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*ಶ್ರೀಮತಿ ಸರಯೂಬಾಲಾ ದೇವಿ*
*25 , Kankulia Road, Ballyganje*
*Calcatta*

## ಪತ್ರ - ೯೬

ಶ್ರೀ ಗುರು ಚರಣಂ
— ೬.೧೯೧೩; ೭ನೇ ಆಷಾಢ,
ಜಯರಾಂಬಾಟಿ

ಶುಭವಾಗಲಿ.

ಮಗೂ, ನಿನ್ನ ಪತ್ರ ಸಿಕ್ಕಿ ಎಲ್ಲವನ್ನೂ ತಿಳಿದುಕೊಂಡೆ. ರಾಧುವಿಗೆ ಸದ್ಯ ಒಬ್ಬ ಮುಸಲ್ಮಾನ್ ಫಕೀರ ಚಿಕಿತ್ಸೆ ನಡೆಸುತ್ತಿದ್ದಾನೆ. ಹಾಗೂ ಈಗ ಸ್ವಲ್ಪ ಚೆನ್ನಾಗಿದ್ದಾಳೆ. ಆದುದರಿಂದ ಈಗ ಬೇರೆ ಪ್ರಯತ್ನದ ಆವಶ್ಯಕತೆ ಇಲ್ಲ. ನಿನಗೆ ನನ್ನ ಆಶೀರ್ವಾದ. ನಿನ್ನ ವೃದ್ಧ ತಂದೆಯ ಮನಸ್ಸಿನಲ್ಲಿ ಅಸಂತೋಷ ಉಂಟುಮಾಡಬಾರದು. ಅವರು ಏನು ಹೇಳುವರೋ ಹಾಗೆಯೇ ಮಾಡುವುದು ಉಚಿತ.

ಇತಿ ಆಶೀರ್ವಾದ ಮಾಡುತ್ತಿರುವ
ನಿನ್ನ ಮಾತೆ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*Sj Surendranath Guptha*
*Barodamohan Das, West of Church , Sylhet*

## ಪತ್ರ - ೯೭

ಶ್ರೀ ಶ್ರೀ ಗುರುದೇವ ಶರಣಂ
೨೨.೭.೧೯೧೩

ಶುಭವಾಗಲಿ,

ತಾಯಿ, ನಿನ್ನ ಪತ್ರವು ಸಿಕ್ಕಿದೆ. ನಾನು ಚೆನ್ನಾಗಿದ್ದೇನೆ. ರಾಧು ೨ ದಿನ ಚೆನ್ನಾಗಿರುವಳು. ३, ೫ ದಿನಗಳು ಅಸ್ವಸ್ಥಳಾಗುವಳು. — ಈ ರೀತಿಯಲ್ಲೇ ನಡೆಯುತ್ತಿದೆ. ಮನೆಯಲ್ಲಿ ಉಳಿದೆಲ್ಲವೂ ಕುಶಲ. ನಿನಗೆ ನನ್ನ ಆಶೀರ್ವಾದ.

೫ ನೇ ಶ್ರಾವಣ — ಜಯರಾಂಬಾಟಿ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*ಶ್ರೀಮತಿ ಸರಯೂ ಬಾಲಾ ದೇವಿ*
*25, kankulia Road*
*Ballyganj , calcatta*

## ಪತ್ರ - ೯೮

ಶ್ರೀ ಶ್ರೀ ರಾಮಕೃಷ್ಣ ಶರಣಂ
೨೭.೮.೧೯೧೩
ಮಂಗಳವಾರ, ಜಯರಾಂಬಾಟಿ

ಮಂಗಳವಾಗಲಿ,

ತಾಯಿ, ನಿನ್ನ ಪತ್ರವು ಸಿಕ್ಕಿ ಎಲ್ಲಾ ಸಮಾಚಾರ ತಿಳಿದುಕೊಂಡೆ. ನಾನು ಚೆನ್ನಾಗಿದ್ದೇನೆ. ಆಶ್ವಯುಜ ಮಾಸದಲ್ಲಿ ಕಲ್ಕತ್ತಕ್ಕೆ ಹೋಗುವ ಇಚ್ಛೆ ಇದೆ. ಆಮೇಲೆ ಠಾಕೂರರ ಇಚ್ಛೆಯಂತೆ. ನಿಮಗೆಲ್ಲಾ ನನ್ನ ಆಶೀರ್ವಾದ.

ಇತಿ ಆಶೀರ್ವಾದ ನೀಡುತ್ತಿರುವ,
ನಿಮ್ಮೆಲ್ಲರ ತಾಯಿ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*ಶ್ರೀಮತಿ ಸರಯೂಬಾಲಾ ದೇವಿ*
*25,Kankulia Road*
*Ballyganj, Calcatta*

## ಪತ್ರ - ೯೯

ಶ್ರೀ ಶ್ರೀ ದುರ್ಗಾ
३.೯.೧೯೧३
೧೮ನೇ ಭಾದ್ರಪದ, ಬುಧವಾರ

ಚಿರಂಜೀವಿಗೆ, ಶುಭವಾಗಲಿ.

ಮಗೂ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನನಗೆ

ಕಾಯಿಲೆಯಾಗಿತ್ತು. (ಈಗ) ಚೆನ್ನಾಗಿದ್ದೇನೆ. ಬಹುಶಃ ನಾನು ಮುಂದಿನ ತಿಂಗಳಲ್ಲಿ ಕಲ್ಕತ್ತಾಕ್ಕೆ ಹೋಗಬಹುದು.ಆಗ ದರ್ಶನ ಕ್ಕಾಗಿ ಬಾ. ಇಲ್ಲಿ ಎಲ್ಲವೂ ಕ್ಷೇಮ. ನಿಮ್ಮ ಮನೆಯ ಕುಶಲವನ್ನು ತಿಳಿಸಿ ನೆಮ್ಮದಿಯನ್ನು ಕೊಡು. ಇನ್ನು ಹೆಚ್ಚು ಏನು ಬರೆಯಲಿ?

ಇತಿ ಮಾತಾದೇವಿ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*

*Tarak Nath Roy Chowdhury*
*Sub Registrar*
*Kathiadi (Mymensingha)*

## ಪತ್ರ - ೧೦೦

ಶ್ರೀಶ್ರೀ ದುರ್ಗಾ
೩.೯.೧೯೧೩
೧೮ನೇ ಭಾದ್ರಪದ, ಬುಧವಾರ

ಪರಮ ಶುಭದಾಯಕ ಮಾತೆ,

ನಿನ್ನ ಪತ್ರ ಸಿಕ್ಕಿ ಸಮಾಧಾನವಾಯಿತು. ನನಗೆ ಕಾಯಿಲೆ ಯಾಗಿತ್ತು. ಈಗ ಚೆನ್ನಾಗಿದ್ದೇನೆ. ಆಮೇಲೆ ತಾಯಿ, ಬಂಗಾಳಿ ಯಲ್ಲಿ ವಿಳಾಸ ಬರೆಯಬೇಕು, ಅಲ್ಲದಿದ್ದರೆ ಯಾರಿಗೂ ಓದಲು ಸಾಧ್ಯವಿಲ್ಲ. ಬಹುಶಃ ನಾನು ಮುಂದಿನ ತಿಂಗಳು ಕಲ್ಕತ್ತಕ್ಕೆ ಹೋಗ ಬಹುದು. ಮತ್ತೆ ನೀವೆಲ್ಲಾ ಹೇಗಿದ್ದೀರಿ ಎಂದು ಬರೆಯಬೇಕು. ಇಲ್ಲಿ ಕ್ಷೇಮ. ನಿನಗೆ ನನ್ನ ಆಶೀರ್ವಾದ. ಠಾಕೂರರು ನಿನಗೆ ಭಕ್ತಿ ಯನ್ನು ನೀಡುವರು.

ಇತಿ ನಿಮ್ಮೆಲ್ಲರ ತಾಯಿ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*

*ಶ್ರೀಮತಿ ಸರಯೂಬಾಲಾ ದೇವಿ*
*25, Kankulia Road*
*Ballygange , Calcatta*

## ಪತ್ರ - ೧೦೧

ಶ್ರೀ ದುರ್ಗಾ
೩ನೇ ಸೆಪ್ಟೆಂಬರ್

UDBODHAN OFFICE
12, 13, Gopal Chandra Neogi Lane
Bagbazar P.O. , CALCUTTA

೧೮ನೇ ಭಾದ್ರಪದ, ಬುಧವಾರ

ಶುಭವಾಗಲಿ.

ಮಗನೆ, ನೀವೆಲ್ಲರೂ ಸುರಕ್ಷಿತವಾಗಿ ತಲುಪಿದಿರಿ ಎಂದು ಕೇಳಿ ಸಮಾಧಾನವಾಯಿತು. ಸುಧೀರಾಗೆ ತುಂಬಾ ಕಷ್ಟವಾಯಿತು ಎಂದು ಕೇಳಿ ದುಃಖವಾಯಿತು. ಏನಾದರಾಗಲಿ ಸುರಕ್ಷಿತವಾಗಿ ತಲುಪಿದಿರಿ. ಠಾಕೂರರ ಕೃಪೆಯಿಂದ ಈ ಮನೆಯಲ್ಲಿ ಎಲ್ಲರೂ ಕ್ಷೇಮ. ಅಲ್ಲಿ ಎಲ್ಲರೂ ಚೆನ್ನಾಗಿರುವರೆಂದು ಕೇಳಿ ಸಮಾಧಾನ ವಾಯಿತು. ನೀನು ಈಗ ಇಲ್ಲಿಗೆ ಬರುವ ಆವಶ್ಯಕತೆ ಇಲ್ಲ. ಈಗ ಎಲ್ಲಾ ತುಂಬಾ ಕಷ್ಟ. ಈಗ ಇಲ್ಲಿಗೆ ಬರುವ ಆವಶ್ಯಕತೆ ಇಲ್ಲ. ನಾನು ಕಲ್ಕತ್ತಕ್ಕೆ ಹೋದಾಗ ಎಲ್ಲರೂ ಆಗ ಅಲ್ಲಿಗೆ ಬನ್ನಿ. ಇನ್ನು ಹೆಚ್ಚು ಏನು ಬರೆಯಲಿ? ನಾನು ಈಗ ಸದ್ಯ ಚೆನ್ನಾಗಿದ್ದೇನೆ. ನಿಮಗೆಲ್ಲರಿಗೂ ನನ್ನ ಆಶೀರ್ವಾದ.

ಇತಿ ಶ್ರೀಮಾತೆ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*

*ನಿಶಿಕಾಂತ ಮಜುಮದಾರ್*
*ಬಿ ೨೧, ಡುರಾಂಡ*
*ರಾಂಚಿ ಸೆಕ್ರೆಟರಿಯೇಟ್*

## ಪತ್ರ - ೧೦೨

೧೧.೯.೧೯೧೩
೨೫ನೇ ಭಾದ್ರಪದ, ಜಯರಾಂಬಾಟಿ

ಪರಮ ಶುಭಾಶೀರ್ವಾದ, ವಿಶೇಷವೇನೆಂದರೆ,

ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ಇಲ್ಲಿ ಎಲ್ಲವೂ ಕ್ಷೇಮ. ರಾಧು, ಮಾಕು, ನಾನು ಎಲ್ಲರೂ ಚೆನ್ನಾಗಿದ್ದೇವೆ. ನೀವೆ ಲ್ಲರೂ ನನ್ನ ಆಶೀರ್ವಾದ ಸ್ವೀಕರಿಸಿ.

ಇತಿ,
ನಿನ್ನ ತಾಯಿ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*

*ಪರಮ ಶುಭ*
*ಶ್ರೀಮತಿ ಸರಯೂ ಬಾಲಾ ದೇವಿ*
*ನಂ. ೨೫, ಕಾಕುಲಿಯಾ ರೋಡ್ —ಬಾಲಿಗಂಜ್ ಪೋ.*
*ಕಲ್ಕತ್ತಾ*

## ಪತ್ರ ೧೦೩

ಶ್ರೀ ಶ್ರೀ ಹರಿ
೨೨.೯.೧೯೧೩
ಜಯರಾಂ ಬಾಟಿ, ೪ನೇ ಆಶ್ವಯುಜ, ೧೩೨೦

ಶುಭವಾಗಲಿ,

ಪರಮ ಶುಭಾಶೀರ್ವಾದ, ವಿಶೇಷವೇನೆಂದರೆ ನೀನು ಕಳು ಹಿಸಿರುವ ೧೦ ರೂಪಾಯಿ ಸಿಕ್ಕಿದೆ. ಇಲ್ಲಿ ಎಲ್ಲವೂ ಕ್ಷೇಮ. ನಿಮ್ಮೆ ಲ್ಲರ ಕ್ಷೇಮಕ್ಕೆ ಬರೆ. ನೀನು ನನ್ನ ಆಶೀರ್ವಾದ ಸ್ವೀಕರಿಸು.

ಇತಿ,
ನಿನ್ನ ತಾಯಿ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*

*ಶ್ರೀಮಾನ್ ತಾರಕ್‌ನಾಥ್ ದೇವಶರ್ಮ ಬಾಬಾಜಿ*
*Katiadi (Mymensing )*
*ಪೋ: ಕಥಿಯಾದಿ ,ರಿಜಿಸ್ಟ್ರಿ ಆಫೀಸ್ , ಮೈಮನ್‌ಸಿಂಗ್*